ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಯಡಿಯೂರು ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 22.09.15

ಈ ವಾರದ ಮುನ್ಸೂಚನೆ (23-09-15 to 27.09.15 ವರೆಗೆ)

ನಿಯತಾಂಕಗಳು	23/9/15	24/9/15	25/9/15	26/9/15	27/9/15
ಮಳೆ (ಮಿ ಮಿ)	0	9	9	13	13
ಗರಿಷ್ಠ ಉಷ್ಣಾಂಶ(ಡಿ.ಸೆ.)	29	30	32	31	29
ಕನಿಷ್ಠ ಉಷ್ಣಾಂಶ (ಡಿ.ಸೆ.)	19	19	21	21	21
ಮೋಡ (ಪ್ರಮಾಣ)	4	5	5	5	6
ಅರ್ದ್ರತೆ ೭.೨೦ ಬೆ (ಶೇ)	100	99	95	95	96
ಅರ್ದ್ರತೆ ೨.೨೦ ಮ (ಶೇ)	50	52	47	56	62
ಗಾಳಿಯ ವೇಗ (ಕಿ.ಮಿ/ಗಂಟೆಗೆ)	2	3	7	8	9
ಗಾಳಿಯ ದಿಕ್ಕು (ಡಿಗ್ರಿ)	143	350	275	255	260

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಯಡಿಯೂರು ಹಾಗೂ ಸುತ್ತಮುತ್ತ ಮುಂದಿನ ಎರಡು ದಿನಗಳ ನಂತರ ಹಗುರದಿಂದ ಸಾಧಾರಣ ಮಳೆಯ ನಿರೀಕ್ಷೆಯಿದೆ. ಉಳಿದಂತೆ ಮೋಡ ಕವಿದ ವಾತಾವರಣ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 29-32.0^{o}C ಮತ್ತು ಕನಿಷ್ಠ 19-21°C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 95-100% ಇದ್ದು, ಮಧ್ಯಾಹ್ನ 47-62% ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 2-9 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಅಲ್ಪಾವಧಿ ಬೆಳೆಗಳಾದ ಹುರುಳಿ, ಅಲಸಂದೆ, ಸಜ್ಜೆ, ಉದ್ದು, ನವಣೆ, ಎಳ್ಳು, ಸಾಮೆ, ಹೆಸರು ಬೆಳೆಗಳನ್ನು ಬೆಳೆಯಬಹುದು
- ಕಳೆ ನಿರ್ವಹಣೆ ಕೈಗೊಳ್ಳಬೇಕು
- ಎರಡು ದಿನಗಳ ನಂತರ ಮಳೆಯ ನಿರೀಕ್ಷೆ ಇರುವುದರಿಂದ ಔಷಧಿ ಸಿಂಪಡಣೆಯನ್ನು ಮುಂದೂಡಬೇಕು.

ಬೆಳೆ ಹಾಗೂ ತಳಿಗಳು:

ಸೆಪ್ಟೆಂಬರ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು:

ಹುರುಳಿ– ಕೆ.ಬಿ.ಹೆಚ್–೧, ಫ್.ಹೆಚ್.ಜಿ.–೯, **ಅವರೆ**–ಹೆಚ್.ಎ–೧, ೩, ೪, **ಪಾಪ್‌ಕಾರ್ನ್**: ಅಂಬರ್. **ಅಲಸಂದೆ**: ಟಿ.ವಿ.ಎಕ್ಸ್–೯೪೪, ಕೆ.ಬಿ.ಸಿ.–೧, ಕೆ.ಎಮ್–5, ಅಥವಾ ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. 4ರಷ್ಟು ಬೇವಿನ ಕಷಾ0ಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು. ಅಂಟು ದ್ರಾವಣವನ್ನು ಲೇಪಿಸಿದ ಹಳದಿ ಬಣ್ಣದ ಅಂಟು ಬಲೆಗಳನ್ನು ಅಲ್ಲಲ್ಲಿ ಇಡುವುದರಿಂದ ಬಿಳಿನೊಣ, ರೆಕ್ಕೆ ಇರುವ ಏಫಿಡ್ಸ್ ಹಾಗೂ ಇನ್ನಿತರೆ ಕೀಟಗಳು ಆಕರ್ಷಣೆಗೊಂಡು ಆ ಬಲೆಗೆ ಅಂಟಿಕೊಳ್ಳುತ್ತವೆ.
- ✓ ತೊಗರಿಯಲ್ಲಿ ಸೊರಗು ರೋಗ ಇರುವ ಕಡೆ ಕಾರ್ಬೆಂಡೇಜಿಮ್ (1ಮಿ.ಲೀ. ಪ್ರತಿ ಲೀಟರ್ ನೀರಿಗೆ) ತೊಗರಿ ಗಿಡದ ಬುಡದಲ್ಲಿರುವ ಮಣ್ಣಿಗೆ ಸೇರಿಸುವುದು.
- ✓ **ಗೂಡು ಮಾಡುವ ಹುಳು** ಕಂಡುಬಂದರೆ ಕ್ವಿನಾಲ್ಫಾಸ್ (2 ಮಿ.ಲೀ/ಲೀ) ಸಿಂಪಡಿಸಿ.
- ✓ **ದಾಳಿಂಬೆ: ಅಂಗಮಾರಿ ರೋಗಕ್ಕೆ ಸ್ಟ್ರೆಪ್ಟೋಸೈಕ್ಲಿನ್ (೦.೫ಗ್ರಾಂ) + ಕಾಪರ್ ಆಕ್ಸಿ ಕ್ಲೋರೈಡ್ (೨.೫ ಗ್ರಾಂ) ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು. ಬೆಳ್ಳುಳ್ಳಿ ಕಷಾಯ ಕೂಡ ಬ್ಯಾಕ್ಟೀರಿಯನಾಶಕ ಗುಣವನ್ನು ಹೊಂದಿದೆ.**
- ✓ **ಕಾಯಿ ಕೊಳೆ ರೋಗಕ್ಕೆ ಕ್ಯಾಪ್ಟಾನ್ ಸಿಂಪಡಿಸಬಹುದುನ್ ಅಥವಾ ಕಸ್ಟೋಡಿಯಾ ಶಿಲೀಚಿಧ್ರನಾಶಕವನ್ನು ಸಿಂಪಡಿಸಬಹುದು.**

ನೋಡಲ್ ಅಧಿಕಾರಿ:
ಕೃಷಿ ಹವಾಮಾನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು